ಸಿವಿಲ್ ಜಡ್ಜ ಮತ್ತು ಜೆ. ಎಂ. ಎಫ್. ಸಿ. ನ್ಯಾಯಾಲಯ, ಶಿಗ್ಗಾಂವ

ಸಿ.ಸಿ. ನಂಃ 1146/2015

ಸಿ.ಡಬ್ಲ್ಯೂ 04
ಪಿ.ಡಬ್ಲ್ಯೂ 02

ಸಾಕ್ಷಿದಾರರ ಹೆಸರುಃ - ಚನ್ನಪ್ಪ ನಿಂಗಪ್ಪ ಗೊಣೆಪ್ಪನವರ

ವಯಸ್ಸು - 63 ವರ್ಷ

ಉದ್ಯೋಗ - ವ್ಯವಸಾಯ

ವಾಸಸ್ಥಳ - ಬಂಕಾಪುರ

ದಿನಾಂಕಃ 12-08-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ - ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-1 ನನ್ನ ಮಗಳು.ಚಾಸಾ-5 ನನ್ನ ಮಗ. ಚಾಸಾ-7 ನನ್ನ ಹೆಂಡತಿ ಇರುತ್ತಾರೆ.ಆರೋಪಿಯು ನನ್ನ ಸಂಬಂಧಿಕರು ಇರುತ್ತಾರೆ. 7 ವರೆ ವರ್ಷಗಳ ಹಿಂದೆ 8 -9 ಗಂಟೆ ಸುಮಾರಿಗೆ ಆಸ್ತಿ ನಂಬರ 282 ರಲ್ಲಿ ಬಣವೆಯನ್ನು ಒಟ್ಟುತ್ತಿದ್ದಾಗ, ಇದು ನನ್ನ ಜಾಗ ಎಂದು ಆರೋಪಿಯು ನಮಗೆ ಹೇಳಿದರು. ನಾವು ಅರ್ದ ಬಣವೆಯನ್ನು ಒಟ್ಟಿದ್ದೇವು ಆಗ ಆರೋಪಿಯು ಒಟ್ಟಿದರೆ ಪಿರ್ಯಾದಿಯನ್ನು ಕೊಡುತ್ತೇನೆ ಎಂದು ಹೇಳಿದರು.ಆಗ ಪೋಲಿಸರು ಬಂದು ಇಲ್ಲಿ ಒಟ್ಟಬಾರದು ಎಂದು ಹೇಳಿದರು ನಾನು ನಾಲ್ಕು ದಿವಸ ಸಮಯ ತೆಗೆದುಕೊಂಡು ಬೇರೆಯವರ ಹಿತ್ತಲದಲ್ಲಿ ಒಟ್ಟಿದೆವು. ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆಯನ್ನು ಪಡೆದಿರುವುದಿಲ್ಲ. ನಾನು ನ್ಯಾಯಾಲಯದ ಮುಂದೆ ಇರುವ ಮು ಮಾಗಳನ್ನು ನೋಡಿ ಗುರುತಿಸಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲಕರ ಸಾಕ್ಷಿ ನುಡಿದ ಕಾರಣ ಸಹಾಯಕ ಸರ್ಕಾರಿ ಅಭಿಯೋಕರಿಗೆ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ದಿ 29-03-2015 ರಂದು 9.30 ಗಂಟೆ ಸುಮಾರಿಗೆ ಚಾಸಾ-1,5 ಮತ್ತು 7 ರವರು ಬಣುವೆಯನ್ನು ಒಟ್ಟಲು ಹೋಗಿದ್ದೆವು ಎಂದರೆ ಸರಿ.ಆಗ ಆರೊಪಿಯು ಬಂದು ಬಣವಿಯನ್ನು ಒಟ್ಟಬಾರದು ಎಂದು ಹೇಳಿದರು ಆಗ ನನ್ನ ಮಗಳು ನನ್ನ ಜಾಗ ಎಂದು ಹೇಳಿದರು ಎಂದರೆ ಸರಿ. ಆಗ ಆರೋಪಿಯು ನನ್ನ ಮಗಳಿಗೆ ಕೆಟ್ಟ ಶಬ್ದಗಳಿಂದ ಬೈದರು ಎಂದರೆ ಸರಿ. ಆಗ ಆರೋಪಿಯು ಅತೀಕ್ರಮ ಪ್ರವೇಶ ಮಾಡಿ ನನ್ನ ಮಗಳ ಕೈ ಹಿಡಿದು ದೂಡಿ ಕೆಳಗೆ ಕೆಡವಿದರು ಎಂದರೆ ಸರಿ. ಕೋಲಿನಿಂದ ಆರೋಪಿಯು ನನ್ನ ಮಗಳ ಮೈಕೈಗೆ ಹೊಡೆದರು ಎಂದರೆ ಸರಿ ಮತ್ತು ಕೈಯಿಂದ ಬಲಗೈಗೆ ಚೂಟಿದರು ಎಂದರೆ ಸರಿ. ಆವಾಗ ನಾವು ಜಗಳ ಮಾಡಬೇಡಿ ಎಂದು ಹೋಗಿ ಹೇಳಿದ್ದೆವು ಎಂದರೆ ಸರಿ. ನಾನು ಬಿಡಿಸಲು ಹೋದಾಗ ಆರೋಪಿಯು ನನ್ನನ್ನು ಅವಾಚ್ಯ ಶಬ್ದಗಳಿಂದ ಬೈದು ಎದೆ ಮೇಲಿನ ಅಂಗಿಯನ್ನು ಎಳೆದಾಡಿ ದಂಟಿನಿಂದ ಮೈಕೈಗೆ ಹೊಡೆದರು ಎಂದರೆ ಸರಿ.ಆಗ ನನ್ನ ಹೆಂಡತಿ ಬಿಡಿಸಲು ಬಂದಾಗ ಅವರಿಗೂ ಕೂಡ ಆರೋಪಿಯು ಅವಾಚ್ಯ ಶಬ್ದದಿಂದ ಬೈದರು ಎಂದರೆ ಸರಿ. ಆಗ ನನ್ನ ಮಗ ಚಾಸಾ-5 ಮತ್ತು 6 ಜಗಳ ಬಿಡಿಸಿದರು ಎಂದರೆ ಸರಿ. ಆರೋಪಿಯು ಇನ್ನೊಂದು ಸಲ ಈ ಜಾಗಕ್ಕೆ ಬಂದರೆ ಬಿಡುವುದಿಲ್ಲ ಎಂದು ಜೀವದ ಬೆದರಿಕೆ ಹಾಕಿದರು ಎಂದರೆ ಸರಿ. ಆಮೇಲೆ ನನ್ನ ಮಗಳು ಹೋಗಿ ಬಂಕಾಪುರ ಸರಕಾರಿ ಆಸ್ಪತ್ರೆಗೆ ಚಿಕಿತ್ಸೆ ಪಡೆದುಕೊಂಡರು ಎಂದರೆ ಸರಿ. ನಾನು ಈ ತರಹ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ. ನ್ಯಾಯಾಲಯದ ಮುಂದೆ ಇರುವ ಬಡಿಗೆಯಿಂದ ಆರೋಪಿಯು ಆ ದಿನ ಚಾಸಾ-1 ನೇ ದವರಿಗೆ ಹೊಡಿದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ಬಡಿಗೆ ಇಂದ ಹೊಡೆದಿದ್ದರು ಸಹ ಹಾಗೂ ನನಗೆ ಅದರ

ಬಗ್ಗೆ ಗೊತ್ತಿದ್ದರು ಸಹ ನಾನು ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಶ್ರೀ ಎನ್ ಎನ್ ಪಿ   ಆರೋಪಿ ಪರ ವಕೀಲರು

ಆರೋಪಿಯು ನಾವು ಹರಕತ್ತು ಮಾಡಬಾರದು ಎಂದು ಈ ನ್ಯಾಯಾಲಯದಲ್ಲಿ ಒ ಎಸ್ 149/2012 ನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯು ಹಾಕಿದ ದಿನದಿಂದ ನಮಗೂ ಆರೋಪಿಗೂ ಮನಸಾಮನಸು ಸರಿಯಿಲ್ಲ ಎಂದರೆ ಸರಿ.ನನಗೆ ಘಟನೆ ಆದ ತಾರಿಕು, ತಿಂಗಳು ಮತ್ತು ಈಸವಿ ಹೇಳಲು ಬರುವುದಿಲ್ಲ. ಆರೋಪಿಯು ನನ್ನ ಜಾಗದಲ್ಲಿ ಸೊಪ್ಪು ಒಟ್ಟಬೇಡ ಎಂದು ಹೆಳಿದ್ದಕ್ಕೆ ನಾನು ಬೇರೆ ಜಾಗೆಯಲ್ಲಿ ಹೋಗಿ ಒಟ್ಟಿರುತ್ತೇನೆ ಎಂದರೆ ಸಾಕ್ಷಿಯು ನಂತರ ಹೋಗಿ ಒಟ್ಟಿರುತ್ತೇನೆ ಎಂದು ನುಡಿಯುತ್ತಾರೆ ಪೋಲಿಸರು ನನ್ನನು ಮತ್ತು ಆರೊಪಿಯನ್ನು ಕರೆದಿದ್ದರು ಎಂದರೆ ಸರಿ.ಆರೋಪಿಯು ನ್ಯಾಯಾಲಯದಲ್ಲಿ ಸಿವಿಲ ದಾವೆಯನ್ನು ಹಾಕಿದ್ದು ಆರೋಪಿಯು ನನಗೆ ತನ್ನ ಜಾಗೆಯಲ್ಲಿ ಹರಕತ್ತ ಮಾಡಬಾರದು ಎಂದು ಹೇಳಿದರು ಎಂದರೆ ಸರಿ.ಆರೋಪಿಯು ನಮಗೆ ತೊಂದರೆ ಕೊಡಬೇಡಿ ಎಂದು ಹೇಳಿದರು ಎಂದರೆ ಸಾಕ್ಷಿಯು ಅವರು ಹೇಳುತ್ತಾರೆ ಎಂದು ನುಡಿಯುತ್ತಾರೆ. ಆಗ ನನ್ನ ಮಗ ಮಗಳು ಪೋಲಿಸ ಠಾಣೆಯಲ್ಲಿ ದಟ್ಟತನ ದಿಂದ ನಾವು ತೊಂದರೆ ಕೊಡುತ್ತೇವೆ ನೀವು ಎನು ಬೇಕಾದರು ಮಾಡಿ ಎಂದು ಹೇಳಿದರು ಎಂದರೆ ಸರಿ. ನಾವು ಬೈದಾಡಿದ್ದೇವೆ ಮತ್ತು ಜೀವದ ಬೆದರಿಕೆ ಹಾಕಿರುತ್ತೇವೆ ಎಂದು ಆರೋಪಿಯು ದೂರನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಹೌದು ದೂರನ್ನು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ .ಆರೋಪಿಯು ದೂರನ್ನು ಕೊಟ್ಟ ನಂತರ ನನ್ನ ಮಗಳು ಸುಳ್ಳು ಪಿರ್ಯಾದಿಯನ್ನು ಹಾಕಿರುತ್ತಾರೆ ಎಂದರೆ ಸರಿ. ಆರೋಪಿಯು ಎನೂ ಬೈದಾಡದೇ ಇದ್ದರೂ ಹಾಗೂ ಹೊಡೆಬಡೆ ಮತ್ತು ಜೀವದ ಬೆದರಿಕೆ ಮಾಡದೇ ಇದ್ದರೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.ಆರೋಪಿಯು

ನನಗೂ ಮತ್ತು ನನ್ನ ಮಗಳಿಗೂ ಬೈದಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು )

**ಓ ಹೆ ಕೆ ಸರಿ ಅದೆ.**

**ಜೆ. ಎಂ. ಎಫ್. ಸಿ., ಶಿಗ್ಗಾಂವ.**